SERVICE ABOVE SELF



Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

Rotary THE MAGIC OF ROTARY 2024-25

Rtn. Stephanie A. Urchick
RI President 2024-25

Rtn. CA Dev Anand
District Governor 2024-25

Rtn. K. Sooryanarayana Udpa
President, Mob: 99009 66114

Rtn. N.G. Usha
Secretary, Mob : 81975 92278

Rtn. M. Madhavachar
Bulletin Editor, Mob: 98862 73495

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 67 | ಸಂಚಿಕೆ –44 | ದಿನಾಂಕ : 30–04–2025




**'ಕೇಕ್ ಬಿಡಿ, ಗಿಡ ನೆಡಿ' – 'ಪ್ಲಾಸ್ಟಿಕ್ ತ್ಯಜಿಸಿ, ಪರಿಸರ ಉಳಿಸಿ', 'Save Forest' ಇತ್ಯಾದಿ ಘೋಷಣೆಯುಳ್ಳ ಫಲಕಗಳೊಂದಿಗೆ ದಿನಾಂಕ: 29.04.2025 ರಂದು 'World Earth Day' ಆಚರಿಸುವ ನಿಮಿತ್ತ ನಮ್ಮ ಶಿವಮೊಗ್ಗೆಯ ಎಂಟು ಕ್ಲಬ್‌ಗಳ ಹಾಗೂ ಮಾಜಿ ರೋಟರಿ ಜಿಲ್ಲಾ ಗವರ್ನರ್ ದಿ. ಎಂ.ಜಿ. ರಾಮಚಂದ್ರ ಮೂರ್ತಿಯವರ ಕನಸಿನ ಕೂಸು – 'Bio Diversity Forest' ಯೋಜನೆಯನ್ನು ಹಮ್ಮಿಕೊಂಡಿರುವ ಪ್ರದೇಶ ಗಾಡಿಕೊಪ್ಪ – ಪುರದಾಳ್ ರಸ್ತೆಯಲ್ಲಿ ಸಿಗುವ ತುಂಗಾ ಮೇಲ್ದಂಡೆ ಯೋಜನೆಯಡಿಯಲ್ಲಿ ದೊರಕಿರುವ ಚಾನಲ್ ಏರಿಯಾದಲ್ಲಿ ಮಂಜೂರಾಗಿರುವ ಭೂಮಿಯಲ್ಲಿ ಮೇಲ್ಕಂಡಂತೆ ಜೈವಿಕ ಅರಣ್ಯ ಯೋಜನೆಯನ್ನು ಅಭಿವೃದ್ಧಿಗೊಳಿಸುತ್ತಿರುವ ಸ್ಥಳದಲ್ಲಿ ಮೇಲ್ಕಂಡ ದಿನಾಂಕದಂದು ಬೆಳಿಗ್ಗೆ 8.30 ಕ್ಕೆ ರೋಟರಿಯ ವಾರದ ಸಭೆಯನ್ನು ಕರೆಯಲಾಗಿತ್ತು.**

ವೇದಿಕೆಯಲ್ಲಿ ಅಂದಿನ ಮುಖ್ಯ ಅತಿಥಿಗಳಾದ ಮಾಜಿ ಸಹಾಯಕ ಗವರ್ನರ್ ಮತ್ತು ಬಯೋಡೈವರ್ಸಿಟಿ ಫೌಂಡೇಷನ್‌ನ ಕಾರ್ಯದರ್ಶಿಯವರಾದ ರೊ.ಆನಂದ ಮೂರ್ತಿಯವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಅವರೊಂದಿಗೆ ವೇದಿಕೆಯಲ್ಲಿ ನಮ್ಮ ಕ್ಲಬ್‌ನ ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣ ಉಡುಪರು, ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ಬಯೋಡೈವರ್ಸಿಟಿ ಫೌಂಡೇಷನ್‌ನ ಚೇರ್ಮನ್ ರೊ.ಎ.ಎಸ್. ಚಂದ್ರಶೇಖರ್, ವೈಸ್‌ಚೇರ್ಮನ್ ರೊ. ಹೆಚ್.ಎನ್.ಎಸ್. ರಾವ್, ಸಹಾಯಕ ಗವರ್ನರ್ ರೊ. ಎಸ್.ಆರ್.ನಾಗರಾಜ್‌ರವರು ಉಪಸ್ಥಿತರಿದ್ದರು.

ಕ್ಲಬ್‌ನ ಮಾಜಿ ಅಧ್ಯಕ್ಷರಾದ ರೊ.ಎನ್.ವಿ.ಭಟ್‌ರವರು "ನೀ ನಮ್ಮ ಗೆಲುವಾಗಿ ಬಾ" ಹಾಡಿನೊಂದಿಗೆ ಗಣಪನ ಪ್ರಾರ್ಥನೆ ಮಾಡಿದರು. ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣ ಉಡುಪರವರು ಸರ್ವರನ್ನು ಸ್ವಾಗತಿಸಿದರು. ಬಯೋಡೈವರ್ಸಿಟಿ ಫೌಂಡೇಷನ್‌ನ ಸಹಕಾರ್ಯದರ್ಶಿ ರೊ.ವೀರಣ್ಣ ಎ. ಹುಗ್ಗಿಯವರು ಅಂದಿನ ಮುಖ್ಯ ಅತಿಥಿಗಳಾದ ರೊ.ಆನಂದಮೂರ್ತಿಯವರ ಪರಿಚಯ ಹಾಗೂ ಪ್ರಾಸ್ತಾವಿಕ ನುಡಿಗಳನ್ನಾಡಿದರು. ರೋಟರಿಯು ಇದೊಂದು ಸಿಗ್ನೇಚರ್ ಪ್ರಾಜೆಕ್ಟ್‌ನ್ನಾಗಿ ಮಾಡಬೇಕೆಂದು ಕನಸುಕಂಡಿದೆ ಎಂದು ವಿವರಗಳನ್ನಾಡುತ್ತಾ ಆ ನಿಟ್ಟಿನಲ್ಲಿ ಈ ಸ್ಥಳದಲ್ಲಿ ಸುಮಾರು 2000 ಮರಗಳನ್ನು ನೆಟ್ಟು ಬೇಲಿ ಮಾಡಲಾಗಿದೆ. ಈ ಎಲ್ಲಾ ಕಾರ್ಯಗಳಿಂದ ಈ ಪ್ರದೇಶದಲ್ಲಿ ಆಕ್ಸಿಜನ್ ಹಬ್ಬವಾಗಬೇಕು. ಜಿಲ್ಲಾ ಪಂಚಾಯತ್ ಮುಂತಾದ ಸರ್ಕಾರದ ಇಲಾಖೆಗಳನ್ನು ಭೇಟಿ ಮಾಡಿ, ಈ ಯೋಜನೆಗೆ ಮುಂದಡಿಯಿಟ್ಟಿದ್ದೇವೆ ಎನ್ನುತ್ತಾ ಬಯೋಡೈವರ್ಸಿಟಿ ಫೌಂಡೇಷನ್‌ಗೆ ಎಲ್ಲಾ ರೋಟರಿ ಸದಸ್ಯರುಗಳು ಟ್ರಸ್ಟಿಗಳಾಗಬೇಕೆಂದು ಮನವಿ ಮಾಡಿದರು. ರೊ.ಎನ್.ಜಿ. ಉಷಾರವರ ಹುಟ್ಟು ಹಬ್ಬದ ಪ್ರಯುಕ್ತ ವೇದಿಕೆಯಲ್ಲಿ ಅವರನ್ನು ಅಭಿನಂದಿಸಲಾಯಿತು.

ಮುಖ್ಯ ಅತಿಥಿಗಳಾದ ರೊ.ಆನಂದಮೂರ್ತಿಯವರು ಇದು ಒಳ್ಳೆಯ ಯೋಜನೆ ಇಂದು ಇಲ್ಲಿ ತಾವು ಉಪಹಾರದ ಸಭೆಯನ್ನು ಕರೆದಿದ್ದೀರಿ ಅದಕ್ಕಾಗಿ ವಂದನೆಗಳು ಎನ್ನುತ್ತಾ ರೊ. ಎಂ.ಜಿ.ರಾಮಚಂದ್ರ ಮೂರ್ತಿಯವರ ಕನಸಿನ ಕೂಸು ಇದು. ಅವರ ಅವಧಿಯಲ್ಲಿ ಇದು

## ಈ ವಾರ

**ದಿನಾಂಕ: 07–05–2025, ಬುಧವಾರ** **ಸಂಜೆ 6:45ಕ್ಕೆ**

ಮುಖ್ಯ ಅತಿಥಿ: **ಡಾ. ನಿರಂಜನ ಹೆಗಡೆ ಹೊಸಬಾಳೆ**
ಆಯುರ್ವೇದ ತಜ್ಞರು ಹಾಗೂ ಮನಶಾಸ್ತ್ರಜ್ಞರು
ಆಪ್ಯಮ್ ಆಯುರ್ವೇದ ಚಿಕಿತ್ಸಾ ಕೇಂದ್ರ, ಸಾಗರ

ವಿಷಯ: **ಸಾಧನೆಗೆ ಸಾಧನ ಸದ್ಭಾವನ**

**ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ**

ಸ್ಥಳ: **ರೋಟರಿ ಯುವ ಕೇಂದ್ರ**, ಸವಳಂಗ ರಸ್ತೆ, ಶಿವಮೊಗ್ಗ

















ಅಧಿಕೃತವಾಗಿರಲಿಲ್ಲ. ಆದರೆ ಈಗ ಈ ಬಗ್ಗೆ ರೊ.ಪಿಡಿಜಿ. ಡಾ.ಪಿ.ನಾರಾಯಣರವರ ಮಾರ್ಗದರ್ಶನದಂತೆ ಒಂದು ಟ್ರಸ್ಟ್ ರಚನೆಯಾಗುತ್ತಿದೆ. ಅದಕ್ಕೆ ಎಲ್ಲರೂ ಟ್ರಸ್ಟಿಗಳಾಗಬೇಕೆಂದು ಮನವಿ ಮಾಡಿದರು. ಈ ರೋಟರಿ ಕ್ಲಬ್ ಶಿವಮೊಗ್ಗವು ಅಂದಿನ ಮೈಸೂರು ಸಂಸ್ಥಾನದ ಅಭಿವೃದ್ಧಿ ಹರಿಕಾರರಾದ ಮೈಸೂರು ಮಹಾರಾಜರಿಂದ 67 ವರ್ಷಗಳ ಹಿಂದೆ ಉದ್ಘಾಟನೆಯಾದ ಕ್ಲಬ್. ಆದ್ದರಿಂದ ಈ ಕ್ಲಬ್‌ಗೆ ಆನೆ ಬಲ ಬಂದಿದೆ. ಹಲವಾರು ಉತ್ತಮೋತ್ತಮ ಕಾರ್ಯಗಳನ್ನು ಮಾಡಲಾಗಿದೆ. ಆ ಕಾರ್ಯ ಗುರುತು ಮಾಡುವಂತಹುದಾಗಿದೆ ಎಂದರು.

**Save Forest Save the Earth** ಅಂಥ ಘೋಷಣೆಗಳಿದ್ದರೂ ನಾವುಗಳು ಸರ್ಕಾರದ ಇಲಾಖೆಗಳಿದ್ದರೂ ಅನಿವಾರ್ಯವಾಗಿ ಹಲವಾರು ಮರಗಳನ್ನು ಕಡಿದಿದ್ದೇವೆ. ಈಗ ಎಂಜಿಆರ್‌ರವರ ಪ್ರೋತ್ಸಾಹದಿಂದ ಈ ಅರಣ್ಯಯೋಜನೆ ಮಾಡಲು ಸಹಕಾರವಾಗಿದೆ ಎಂದರು.

ತುಂಗಾ ಮೇಲ್ದಂಡೆ ಯೋಜನೆಯಲ್ಲಿ 13. ಕಿ.ಮಿ. ಬಂದಿದೆ. ಆದರೆ ನಾವು ಕೇವಲ 3 ಕಿ.ಮಿ. ಕೇಳಿದ್ದೇವೆ. ಈಗ ನೋಡಿದರೆ ಜಾಸ್ತಿ ಎನ್ನಿಸುತ್ತಿದೆ. ಇಲಾಖೆಯ ಅಧಿಕಾರಿಗಳು ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದೀರಿ ಎಂದು ಬೆನ್ನುತಟ್ಟಿದ್ದಾರೆ. ಇದು ನಗರ ಪ್ರದೇಶಕ್ಕೆ ಹತ್ತಿರವಿದೆ. ಆದರೆ ಇಲ್ಲಿ ಡೀಪ್ ಕಟಿಂಗ್ ಆಗಿರುವುದರಿಂದ ಬಹಳ ಶ್ರಮದ ಕೆಲಸವಿದೆ. ಈವರೆವಿಗೆ ಎಲ್ಲಾ ರೋಟರಿ ಕ್ಲಬ್‌ಗಳು ಹೆಚ್ಚಿನ ಮಟ್ಟದಲ್ಲಿ ದೇಣಿಗೆ ನೀಡಿವೆ. ಮೊದಲು ಇದು ಗಾಡಿಕೊಪ್ಪದವರೆಗೆ ಗೋಮಾಳವಾಗಿತ್ತು. ಆದರೆ ಈಗ ಇಲ್ಲಿ ತಂತಿ ಬೇಲಿ ಹಾಕಲಾಗಿದೆ. ಗಿಡಗಳು ಹೋಗತ್ತೆ ಬರತ್ತೆ. ಆದರೆ ಅವುಗಳನ್ನು ಕಾಪಾಡುವುದೇ ಸವಾಲಾಗಿದೆ. ಗಿಡಗಳನ್ನು ಹಾಕಲು 20 ಎಕರೆ ಸಮತಟ್ಟು ಮಾಡಲಾಗಿದೆ. ಅಲ್ಲದೇ ಇಲ್ಲಿ ಕೊಳವೊಂದನ್ನು ನಿರ್ಮಿಸಲಾಗಿದೆ. ಮತ್ತಿತರ ಕಾರ್ಯಗಳು ಸಾಗಿದೆ ಎನ್ನುತ್ತಾ ಅಭಿವೃದ್ಧಿಯ ವಿವರಗಳನ್ನು ನೀಡಿದರು.

ಈ ಹಿಂದೆ ಅಂದರೆ 40–50 ವರ್ಷಗಳ ಹಿಂದೆ ಶಿವಮೊಗ್ಗೆಯಲ್ಲಿ ಸಮೃದ್ಧವಾಗಿ ಮಳೆ ಸುರಿಯುತ್ತಿತ್ತು. ಅಲ್ಲಿಂದೀಚೆಗೆ ಮಳೆಯ ಪ್ರಮಾಣ ಕಡಿಮೆಯಾಗಿ ಬಿಸಿಲ ಝಳ ಶುರುವಾಗಿದೆ. ಭೂಮಿಯನ್ನು ತಾಯಿ ಎನ್ನುತ್ತೇವೆ. ನೀರನ್ನು ಗಂಗೆ ಎನ್ನುತ್ತೇವೆ. ಇವುಗಳ ಉಳಿವಿಗಾಗಿ ನಾವಲ್ಲದೇ ಯಾರು ಮಾಡಬೇಕು? ಎಂದು ಪ್ರಶ್ನಿಸಿದ ಅವರು, ಈಗಿನ ಯುವ ಪೀಳಿಗೆಯನ್ನು ಈ ನಿಟ್ಟಿನಲ್ಲಿ ಹುರಿದುಂಬಿಸಬೇಕು. ನಮ್ಮ ಒಂದೊಂದು ಕ್ಲಬ್ 10 ಎಕರೆ ಜಾಗ ತೆಗೆದುಕೊಂಡು ಇದರ ಜವಾಬ್ದಾರಿ ವಹಿಸಿಕೊಳ್ಳಬೇಕು ಎಂದರು. ಭೂಮಿಯನ್ನು ಸವಕಳಿ ಮಾಡದೇ ಹೇಗೆ ರಕ್ಷಿಸಬೇಕು ಎನ್ನುವುದನ್ನು ಆಲೋಚಿಸಬೇಕು. ಕಾಡು ಬೆಳೆಸುವವರು ಕಡಿಮೆಯಾಗಿದ್ದಾರೆ. ಡ್ಯಾಮ್ ಕಟ್ಟಿದ್ದಾರೆ. ನಂತರ ಲೇ ಔಟ್‌ಗಳನ್ನು ನಿರ್ಮಾಣ ಮಾಡಿದ್ದಾರೆ. ಇಷ್ಟು ಎಕರೆಗೆ ನೀರು ಇಷ್ಟು ನೀರು ಆಗಬೇಕು ಎಂದಿದೆ ಆದರೆ ಬೇರೆ ತರಹದ ಅಭಿವೃದ್ಧಿಗೆ ಬಳಕೆಯಾಗುತ್ತಿದೆ.

ನಗರ ಪ್ರದೇಶ ಬೆಳೆದಿದೆ. ವ್ಯವಸಾಯಕ್ಕೆ ಬೇಕಾಗುವ ನೀರು ಬೇರೆಯದಕ್ಕೆ ಬಳಕೆಯಾಗುತ್ತಿದೆ. ಇವುಗಳಿಗೆಲ್ಲಾ ತಡೆಯೊಡ್ಡಬೇಕಾಗಿದೆ. **'Save Forest Save the Earth'** ಗುರಿಯನ್ನು ಹೊಂದಿ ಕೆಲಸ ಮಾಡಬೇಕಾಗಿದೆ. ಇವೆಲ್ಲವೂ ನನ್ನ ಮನಸ್ಸಿಗೆ ಬಂದುದನ್ನು ತಮ್ಮೊಂದಿಗೆ ಹಂಚಿಕೊಂಡಿದ್ದೇನೆ. ರೂ.2000.00 ನೀಡಿ ಟ್ರಸ್ಟಿಗಳಾಗಿ ಎಂದರು. ಜೂನ್ 5 ನೇ ತಾರೀಕು ಪರಿಸರ ದಿನಾಚರಣೆಯನ್ನು ವಿಶಿಷ್ಟವಾಗಿ ಇಲ್ಲಿ ಆಚರಿಸೋಣ ಎಂದರು.

ಅಂದು ಆಗಮಿಸಿದ್ದ ಬಯೋಡೈವರ್ಸಿಟಿ ಫೌಂಡೇಷನ್‌ನ ಚೇರ್ಮನ್‌ರಾದ ಮಾಜಿ ಗವರ್ನರ್ ರೊಎ.ಎಸ್. ಚಂದ್ರಶೇಖರ್‌ರವರು

**ನೀವು ಅತ್ಯುತ್ತಮ ರೋಟರಿ ಸದಸ್ಯರೆಂದಾದರೆ ಪ್ರತಿ ವಾರದ ಸಭೆಗೆ ತಪ್ಪದೇ ಬನ್ನಿ**







ಮಾತನಾಡಿ ಆನಂದಮೂರ್ತಿಯವರು ಈಗಾಗಲೇ ಎಲ್ಲವನ್ನು ಮಾತನಾಡಿದ್ದಾರೆ. ಈ ಪ್ರಾಜೆಕ್ಟ್‌ನ್ನು ಪ್ರಾರಂಭಿಸಲು ಇಲ್ಲಿ ಬಂದು ತಾವುಗಳು ಯಾವ ರೀತಿ ಪಡಿಪಾಟಲು ಕಷ್ಟವನ್ನು ಪಟ್ಟಿದ್ದೇವೆ. ಈ ಸ್ಥಿತಿಗೆ ತರಲು ತುಂಬಾ ಶ್ರಮಿಸಿದ್ದೇವೆ ಎಂದರು.

ಸಹಾಯಕ ಗವರ್ನರ್ ರೊ.ಎಸ್.ಆರ್.ನಾಗರಾಜ್‌ರವರು ಮಾತನಾಡಿ, ಈ ಪ್ರಾಜೆಕ್ಟ್‌ನ ಮುಂದುವರೆಸಲು ಎಲ್ಲರ ಸಹಕಾರ ಬೇಕು. ಶಿವಮೊಗ್ಗೆಯ ಎಲ್ಲಾ ರೋಟರಿ ಕ್ಲಬ್ ಮತ್ತು ಅದರ ಸದಸ್ಯರು ಸಹಕಾರ ಪ್ರೋತ್ಸಾಹ ನೀಡಿ ಎಂದು ಮನವಿ ಮಾಡಿದರು.

ಅಧ್ಯಕ್ಷರಾದ ರೊ.ಕೆ. ಸೂರ್ಯನಾರಾಯಣ ಉಡುಪರು ಮಾತನಾಡಿ, ಈ ಪ್ರಾಜೆಕ್ಟ್‌ಗೆ ಎಲ್ಲಾ ರೋಟರಿ ಸದಸ್ಯರುಗಳ ಸಹಕಾರ ಬೇಕಾಗಿದ್ದು ಅವರುಗಳು ಇದಕ್ಕೆ ಟ್ರಸ್ಟಿಗಳಾಗುವುದರ ಮೂಲಕ ಇದರ ಅಭಿವೃದ್ಧಿಗೆ ಒತ್ತಾಸೆ ನೀಡಬೇಕೆಂದು ಮನವಿ ಮಾಡಿದರು ಮತ್ತು ಇಂದಿನ ಸಭೆಗೆ ಹಲವಾರು ರೋಟರಿ ಬಂಧುಗಳು ಆಗಮಿಸಿ ಸಹಕರಿಸಿದ್ದೀರಿ ನಿಮಗೆಲ್ಲಾ ಕೃತಜ್ಞತೆಗಳು ಹಾಗೂ ಮುಖ್ಯ ಅತಿಥಿಗಳಾದ ರೊ.ಆನಂದಮೂರ್ತಿಯವರಿಗೆ ಕೃತಜ್ಞತೆ ತಿಳಿಸಿದರು.

ಆ ನಂತರ ಕ್ಲಬ್‌ನ ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ಪರಿಸರ ಸಂರಕ್ಷಣೆಯ ಬಗ್ಗೆ ಘೋಷಣೆಯನ್ನು ಸಭೆಯಲ್ಲಿ ಎಲ್ಲರಿಗೂ ಹೇಳಿಕೊಟ್ಟರು. ಅದನ್ನು ಎಲ್ಲರೂ ಪುನರುಚ್ಚರಿಸಿದರು. ಘೋಷಣೆ – **“ಪರಿಸರ ಸಂರಕ್ಷಣೆ ನಮ್ಮ ಹೊಣೆ”, “ಮನೆಗೊಂದು ಮರ ಊರಿಗೊಂದು ವನ”, “ಕೇಕ್ ಬಿಡಿ ಗಿಡ ನೆಡಿ” “ಹಸಿರೇ ಉಸಿರು”** ಕೊನೆಯಲ್ಲಿ ಕಾರ್ಯದರ್ಶಿ ರೊ. ಎನ್.ಜಿ. ಉಷಾರವರು ವಂದನಾರ್ಪಣೆ ಮಾಡಿದರು. ಸಭೆಯ ನಂತರ ಉಪಹಾರ ಏರ್ಪಡಿಸಲಾಗಿತ್ತು. ❖

## PAUL HARRIS - ROTARY'S FOUNDER



**...vith the vision of one man Paul P. Harris.**

...orn on 19 April 1868 in Racine, Wisconsin, ...oved to Wallingford, Vermont, where he grew ...is paternal grandparents. He attended the ...nt and Princeton University and received his ...University of Iowa in 1891.

...s settled in Chicago and opened a law practice. ...met fellow attorney Bob Frank for dinner on ...e. They walked around the area, stopping at ... Harris was impressed that Frank was friendly with many of the shopkeepers. He had not seen this kind of camaraderie among businessmen since moving to Chicago and wondered if there was a way to channel it, because it reminded him of growing up in Wallingford.

“The thought persisted that I was experiencing only what had happened to hundreds, perhaps thousands, of others in the great city. ... I was sure that there must be many other young men who had come from farms and small villages to establish themselves in Chicago. ... Why not bring them together? If others were longing for fellowship as I was, something would come of it.”

Harris eventually persuaded several business associates to discuss the idea of forming an organization for local professionals. On 23 February 1905, Harris, GustavusLoehr, Silvester Schiele, and Hiram Shorey gathered at Loehr's office in downtown Chicago for what would become known as the first Rotary club meeting.

In February 1907, Harris was elected the third president of the Rotary Club of Chicago. Toward the end of his presidency, he worked to expand Rotary beyond the city. Some club members resisted, not wanting to take on the additional financial burden. But Harris persisted, and by 1910, Rotary had expanded to several other major U.S. cities.

Harris recognized the need to form a national association with an executive board of directors. In August 1910, Rotarians held their first national convention in Chicago, where the 16 existing clubs unified as the National Association of Rotary Clubs (now Rotary International). The new association unanimously elected Harris as its president.

At the end of his second term as Rotary president, Harris resigned, citing ill health and the demands of his professional practice and personal life. He was elected president emeritus by convention action, a title he held until his death.

In the mid-1920s, Harris became actively involved in Rotary again, serving as the public face of the organization. To promote membership and service, he attended conventions and visited clubs throughout the world, often accompanied by his wife, Jean.

Harris died on 27 January 1947 in Chicago at age 78, after a prolonged illness. Before his death, he made it known that he preferred contributions to The Rotary Foundation in lieu of flowers. By coincidence, days before he died, Rotary leaders had committed to a major fundraising effort for the Foundation.

Upon news of his death, Rotary created the Paul Harris Memorial Fund as a way to solicit these donations. Rotarians were encouraged to commemorate the late founder of Rotary by contributing to the fund, which would be used for purposes dear to Harris' heart. In the 18 months following his death, The Rotary Foundation received $1.3 million, which helped support the Foundation's first program - scholarships for graduate study abroad.

- Rtn. Dr. P. Narayana



## ಸಂಪಾದಕೀಯ

### ಕ್ಷಮಿಸುವ ಔದಾರ್ಯ

ಶೇಕ್ಸ್‌ಪಿಯರ್‌ನ 'ದ ಟೆಂಪೆಸ್ಟ್' ನಾಟಕದಲ್ಲಿ ಬರುವ ಈತನ ಹೆಸರು ಪ್ರಾಸ್ಪರೋ. ಮಿಲಾನ್ ದೇಶದ ರಾಜ. ಇವನಿಗೆ ಪುಟಾಣಿ ಮಗಳಿದ್ದಳು. ಓದು ಮತ್ತು ಏಕಾಂತ ಇಷ್ಟಪಡುತ್ತಿದ್ದ ದೊರೆ ತನ್ನ ರಾಜ್ಯದ ಆಡಳಿತ ನೋಡಿಕೋ ಎಂದು ಪ್ರಿಯ ತಮ್ಮ ಆಂಟೋನಿಯೋಗೆ ಸೂಚಿಸಿದ.

ಅಣ್ಣನಿಂದ ಅಧಿಕಾರ ಪಡೆದ ಆಂಟೋನಿಯೋ ಅಣ್ಣನನ್ನೇ ಕೊಲ್ಲುವ ಸಂಚು ರೂಪಿಸಿದ. ಒಂದು ಹಡಗಿನಲ್ಲಿ ಅಣ್ಣನನ್ನೂ ಅವಳ ಮಗಳನ್ನು ಬಂಧಿಸಿ ದೂರ ಎಳೆದೊಯ್ದ. ಘನಸಾಗರದ ನಡುವೆ ಹಡಗು ನಿಲ್ಲಿಸಿ ಒಂದು ಪುಟ್ಟ ದೋಣಿಯಲ್ಲಿ ಇವರನ್ನು ತಳ್ಳಿ ಬಂದ. ಹಸಿವು, ನೀರಡಿಕೆಯಿಂದ ಬಳಲಿ ಉಪ್ಪು ನೀರ ನಡುವೆ ನರಳಿ ಅವರು ಸಾಯಲಿ ಎಂಬ ಸಂಚು ಅವನದಾಗಿತ್ತು.

ಪ್ರಾಸ್ಪರೋ ಅಸಹಾಯಕನಾಗಿ ತಡಕಾಡಿದಾಗ ದೋಣಿ ತಳದಲ್ಲಿ ಏನೋ ಕಾಣಿಸಿತು. ನೀರು, ಆಹಾರ, ಬಟ್ಟೆ ಹಾಗೂ ದೊರೆ ಪ್ರಾಸ್ಪರೋ ಪ್ರೀತಿಸುವ ಮಾಂತ್ರಿಕ ವಿದ್ಯೆಯ ಪುಸ್ತಕಗಳು ಅಲ್ಲಿದ್ದವು. ಪ್ರಾಸ್ಪರೋನ ಪ್ರೀತಿಯ ಗೆಳೆಯ ಗನ್ಸಾಲೋ ಎಂಬಾತ ಅದನ್ನು ರಹಸ್ಯವಾಗಿ ಮೊದಲೇ ಇಡಿಸಿ ಬಿಟ್ಟಿದ್ದ. ಜಗತ್ತಿನಲ್ಲಿ ರಕ್ತ ಸಂಬಂಧಿಗಳೇ ಆಸ್ತಿ ಆಸೆಗೆ ಶತ್ರುಗಳಾದಾಗ ನಮ್ಮ ನೆರವಿಗೆ ಅಮೂಲ್ಯ ಸ್ನೇಹಿತರು ಮಾತ್ರ ಉಳಿದಿರುತ್ತಾರೆ ಎಂಬುದನ್ನು ಆತ ಸಾಬೀತು ಮಾಡಿದ್ದ.

ಹೆಣಗಾಡಿ ಒಂದು ದ್ವೀಪ ತಲುಪಿದ ತಂದೆ, ಮಗಳು ಜೀವ ಉಳಿಸಿಕೊಂಡರು. ಅಲ್ಲಿ ನೆಲೆಸಿ ಮಾಂತ್ರಿಕ ವಿದ್ಯೆ ಕಲಿತ ಪ್ರಾಸ್ಪರೋ ಆ ದ್ವೀಪದಲ್ಲಿ ಈ ಮೊದಲು ನೆಲೆಸಿದ್ದ ಮಾಟಗಾತಿಯ ಬಗ್ಗೆ ತಿಳಿದ. ಆಕೆ ಸಾಯುವ ಮೊದಲು ತನ್ನ ಮಾತು ಕೇಳದ ದ್ವೀಪದ ಜೀವ ಚೇತನಗಳನ್ನು ಒಂದು ದೊಡ್ಡ ಮರದಲ್ಲಿ ಸೆರೆ ಇಟ್ಟಿದ್ದಳು. ತನ್ನ ವಿದ್ಯೆ ಬಳಸಿ ಪ್ರಾಸ್ಪರೋ ಅವರಿಗೆಲ್ಲಾ ಮರಳಿ ಜೀವಿಸುವ ಅವಕಾಶ ಒದಗಿಸಿದ. ಯಾರಿಗೂ ಕಾಣದ ಅಗೋಚರ ಚೇತನಗಳಾಗಿದ್ದ ಅವು ಇವನ ಸಹಾಯಕ್ಕೆ ನಿಂತವು.

ತನ್ನ ತಮ್ಮನನ್ನು ರಕ್ಷಿಸುವ ಒಂದು ಅವಕಾಶ ಪ್ರಾಸ್ಪರೋಗೆ ಸಿಕ್ಕಿತು. ಅವರು ಪಯಣ ಮಾಡುತ್ತಿದ್ದ ಹಡಗನ್ನು ಕಂಡ ಪ್ರಾಸ್ಪರೋ ತನ್ನ ಮಾಂತ್ರಿಕ ಶಕ್ತಿಯಿಂದ ಚಂಡಮಾರುತ ಸೃಷ್ಟಿಸಿದ. ಅವರ ಹಡಗು ಮುಳುಗಿತು. ನೀರು ಪಾಲಾದ ಅವರೆಲ್ಲಾ ಅನೇಕ ಕಷ್ಟಗಳನ್ನು ಅನುಭವಿಸಿದರು. ಅವರೆಲ್ಲಾ ಪ್ರಜ್ಞೆ ತಪ್ಪಿ ಇನ್ನೇನು ಸಾಯಬೇಕು ಎಂಬ ಹೊತ್ತಿನಲ್ಲಿ ಕರುಣೆಗೊಂಡ ಪ್ರಾಸ್ಪರೋ ತನ್ನ ಮಾಯಾವಿ ಶಕ್ತಿಯಿಂದ ಅವರನ್ನು ಉಳಿಸಿದ. ಅವರ ಮುಂದೆ ಹಬ್ಬದೂಟವನ್ನಿರಿಸಿ ತಿನ್ನಲು ಓಡಿ ಬಂದಾಗ ಊಟವೇ ಸಿಗದಂತೆ ಮಾಯ ಮಾಡಿದ.

ಅವರಿಗೆ ಹಸಿವು ಹಾಗೂ ಜೀವ ಭಯದ ವೇದನೆ ಅರ್ಥ ಮಾಡಿಸುವುದು ಪ್ರಾಸ್ಪರೋನ ಉದ್ದೇಶವಾಗಿತ್ತು. ದುಃಖ ಮತ್ತು ಭಯದಿಂದ ಕಂಗೆಟ್ಟು ನಡುಗುತ್ತಿದ್ದ ಅವರೆದುರು ಈಗ ಪ್ರಾಸ್ಪರೋ ಕಾಣಿಸಿಕೊಂಡ. ತಾವು ಮಾಡಿದ್ದು ತಪ್ಪಾಯಿತು ಕ್ಷಮಿಸು ಎಂದು ಆಂಟೋನಿಯೋ ಅತ್ತಾಗ, ಪ್ರಾಸ್ಪರೋ ಅವನನ್ನು ಕ್ಷಮಿಸಿದ.

ದ್ರೋಹ ಬಗೆದವರನ್ನು ಕ್ಷಮಿಸುವುದು ಇಷ್ಟು ಸುಲಭದ ಕೆಲಸವಲ್ಲ. ಇಲ್ಲಿ ಪ್ರಾಸ್ಪರೋ ತನ್ನ ಬಾಳಲ್ಲಿ ದುಷ್ಟರಾಗಿ ನಡೆದುಕೊಂಡವರನ್ನು ಮೊದಲು ಶಿಕ್ಷಿಸಿ, ನಂತರ ಕ್ಷಮಿಸಿ, ಕೊನೆಗೆ ಪ್ರೀತಿಯ ಅರ್ಥ ಮಾಡಿಸುತ್ತಾನೆ. ಹಿತಶತ್ರುಗಳ ಅಷ್ಟೂ ತಪ್ಪುಗಳನ್ನೂ ಒಮ್ಮೆಗೇ ಕ್ಷಮಿಸಿ ಪ್ರಾಸ್ಪರೋ ರಾಜನಿಗಿಂತ ನಾವು ದೊಡ್ಡವರಾಗಲು ಸಾಧ್ಯವಿಲ್ಲವೇ?

**ರೊ. ಎಂ. ಮಾಧವಾಚಾರ್**

## THE OBJECT OF ROTARY

The Object of Rotary is to encourage and foster the ideals of service as a basis of worthy enterprise and in particular, to encourage and foster:

**01.** FIRST
The development of acquaintance as an opportunity for service;

**02.** SECOND
High ethical standards in business and professions; the recognition of the worthiness of all useful occupations; and the dignifying of each Rotarian's occupation as an opportunity to serve society;

**03.** THIRD
The application of the ideal of service in each Rotarian's personal, business/professional, and community life;

**04.** FOURTH
The advancement of international understanding, goodwill, and peace through a world fellowship of business and professional persons united in the ideal of service.

### ಚಿಂತನ

ಮನಸೊಂದಿದ್ದರೆ ಮಾರ್ಗವಿದೆ
ನಗುವೊಂದಿದ್ದರೆ ಸ್ವರ್ಗವಿದೆ
ನಂಬಿಕೆಯೊಂದಿದ್ದರೆ ಜೀವನವಿದೆ
ನಿಷ್ಕಲ್ಮಶವಾದ ಭಕ್ತಿಯೊಂದಿದ್ದರೆ ಎಂತಹ ಸಂದರ್ಭದಲ್ಲೂ ಭಗವಂತನ ಅನುಗ್ರಹ ಜೊತೆಗಿರುತ್ತದೆ.

– ರೊ. ಕೆ. ಸೂರ್ಯನಾರಾಯಣ ಉಡುಪ

### ಜನ್ಮ ದಿನದ ಶುಭಾಶಯಗಳು



*Umesh Shenoy*
*01st May*



*Dr. Girish Kumar K.*
*03rd May*



*Gayathri Praveen*
*06th May*

**ಚತುರ್ವಿಧ ಪರೀಕ್ಷೆ– ನಮ್ಮ ಚಿಂತನೆ, ಆಡುವ ಮಾತು ಅಥವಾ ಕೃತಿಗಳಲ್ಲಿ...**

1. ಇದು **ಸತ್ಯವೇ?**
2. ಇದು ಸಂಬಂಧಪಟ್ಟ ಎಲ್ಲರಿಗೆ **ನ್ಯಾಯ ಸಮ್ಮತವೇ?**
3. ಇದು **ಸದ್ಭಾವನೆ** ಮತ್ತು **ಉತ್ತಮ ಸ್ನೇಹ ಸಂಬಂಧವನ್ನು** ಬೆಳೆಸಬಲ್ಲುದೇ ?
4. ಇದು ಸಂಬಂಧಪಟ್ಟ ಎಲ್ಲರಿಗೆ **ಪ್ರಯೋಜನಕಾರಿಯೇ?**

To,

*Book Post*

ಮುದ್ರಣ: ರಾಯಲ್ ಪ್ರಿಂಟರ್ಸ್, ಶಿವಮೊಗ್ಗ, 98862 73495